**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.4/2018**

ಅ.ಸಾ ಃ **3**
ದೋಸಾ ಃ **3**

ಸಾಕ್ಷಿದಾರರ ಹೆಸರು ಃ ಲಿಂಗರಾಜ ಮಡಿವಾಳರ
ತಂದೆಯ ಹೆಸರು ಃ ನಾಗಪ್ಪ
ವಯಸ್ಸು ಃ **47** ವರ್ಷ
ಉದ್ಯೋಗ ಃ ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಶಾಲೆ,
ವಾಸ ಸ್ಥಳ ಃ ಕನಕಾಪುರ

ದಿನಾಂಕಃ**25/10/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

1 ನಾನು 2010 ರಿಂದ ಇಲ್ಲಿಯವರೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕನಕಾಪುರದಲ್ಲಿ ಶಿಕ್ಷಕ ಅಂತಾ ಕೆಲಸ ನಿರ್ವಹಿಸಿದ್ದೇನೆ.

2. ದಿನಾಂಕಃ09/08/2017 ರಂದು ಬಿಇಓ ಕಛೇರಿಯಿಂದ ನಮ್ಮ ಮುಖ್ಯ ಗುರುಗಳಿಗೆ ಫೋನ್ ಮಾಡಿ ನನಗೆ ಎಸಿಬಿ ಕಛೇರಿ ಹಾವೇರಿಗೆ ಹೋಗಲು ಸೂಚನೆ ಕೊಟ್ಟರು. ನಾನು ಎಸಿಬಿ ಕಛೇರಿಗೆ ಅದೇ ದಿನ ಮಧ್ಯಾಹ್ನ 2-00 ಘಂಟೆಗೆ ಹೋದೆ. ಚಾಸಾ-21, ಚಾಸಾ-2 ಮತ್ತು ಚಾಸಾ-1 ಎಸಿಬಿ ಕಛೇರಿಯಲ್ಲಿದ್ದರು. ಚಾಸಾ-21 ರವರು ಚಾಸಾ-1 ಮತ್ತು ಆರೋಪಿತರ ಧ್ವನಿ ಸಂಭಾಷಣೆ ಮೊಬೈಲ್ ನಲ್ಲಿ ಸಂಗ್ರಹ ಆಗಿದ್ದು, ಸದರಿ ಸಂಭಾಷಣೆಯ ಸಿಡಿಯನ್ನು ಲ್ಯಾಪಟ್ಯಾಪಗೆ ಅಳವಡಿಸಿ ನಮಗೆ ಕೇಳಿಸಿರುತ್ತಾರೆ.

3. ಸಾಕ್ಷಿಗೆ ನಿಪಿ-9 ಸಿಡಿ/ಡಿವಿಡಿಯನ್ನು ಲ್ಯಾಪ್‌ಟಾಪ್ ಮುಖಾಂತರ ಹಾಕಿ ಸಂಭಾಷಣೆ ಯನ್ನು ಕೇಳಿಸಿದ್ದು, ಚಾಸಾ-1, 1 ಮತ್ತು 2 ನೇ ಆರೋಪಿಯ ಧ್ವನಿಯನ್ನು ಕೇಳಿ ಗುರುತಿಸಿರುತ್ತಾರೆ. ಚಾಸಾ-1 ರವರು ಚಾಸಾ-21 ರವರಿಗೆ ರೂ.2000/- ಮುಖಬೆಲೆಯ 1 ನೋಟು, ರೂ.500/-

ಮುಖಬೆಲೆಯ 4 ನೋಟುಗಳನ್ನು ಕೊಟ್ಟಿರುತ್ತಾರೆ. ಸದರಿ ನೋಟುಗಳ ಮೇಲೆ ಪೊಲೀಸರು ಪಿನಾಫ್ತಲಿನ್ ಪೌಡರನ್ನು ಸಿಂಪಡಿಸಿದರು. ನೋಟುಗಳ ನಂಬರು ವಿವರಗಳನ್ನು ಬಿಳಿ ಹಾಳೆಯ ಮೇಲೆ ಬರೆದುಕೊಂಡೆವು. ಸದರಿ ನೋಟುಗಳ ನಂಬರು ವಿವರಗಳನ್ನು ಬರೆದುಕೊಂಡ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

4. ನೋಟುಗಳನ್ನು ಒಂದು ಕವರನಲ್ಲಿ ಹಾಕಿದರು. ಸೋಡಿಯಂ ಕಾರ್ಬೋನೇಟ್ ದ್ರಾವಣ ವನ್ನು ತಯಾರಿಸಿದರು. ಅದನ್ನು ಮುಮಾ-1 ಅಂತಾ ಈಗಾಗಲೇ ಗುರುತಿಸಲಾಗಿದೆ. ನನ್ನ ಎರಡೂ ಕೈಗಳನ್ನು ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ಬಂದಿತು. ಸದರಿ ದ್ರಾವಣವನ್ನು ಎಸಿಬಿ ಪೊಲೀಸರು ಪ್ಯಾಕ್ ಮಾಡಿ ಸೀಲು ಮಾಡಿ ಬಾಟಲ್‌ನಲ್ಲಿ ಜಪ್ತಿ ಮಾಡಿದರು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುಮಾ-2 ಅಂತಾ ಗುರುತಿಸಲಾಗಿದೆ.

5. ಚಾಸಾ-1 ರವರನ್ನು ಅಂಗಶೋಧನೆ ಮಾಡಿದರು. ಚಾಸಾ-1 ರವರ ಜೇಬಿನಲ್ಲಿ ರೂ.100/- ಮುಖಬೆಲೆಯ 2 ನೋಟುಗಳು ಮತ್ತು ಒಂದು ಮೊಬೈಲ್ ಪೋನು ಇತ್ತು. ನನ್ನ ಸಹಿ ಪಡೆದಿರುತ್ತಾರೆ. ನಿಪಿ-2 ಕ್ಕೆ ಸಾಕ್ಷಿ ಸಹಿ ನಿಪಿ-2(ಸಿ) ಅಂತಾ ಗುರುತಿಸಲಾಯಿತು.

6. ನಾನು, ಚಾಸಾ-1, ಚಾಸಾ-2, ಚಾಸಾ-21 ಮತ್ತು ಇತರೆ ಸಿಬ್ಬಂದಿ ಪೊಲೀಸ ಜೀಪಿನಲ್ಲಿ ಬಂಕಾಪುರದಲ್ಲಿ 2 ನೇ ಆರೋಪಿ ಮನೆಗೆ ಹೋದೆವು. ಚಾಸಾ-1 ಮತ್ತು 2 ರವರು 2 ನೇ ಆರೋಪಿಯ ಮನೆಗೆ ಹೋದರು. ನಾನು ಮತ್ತು ಎಸಿಬಿ ಪೊಲೀಸರು ಜೀಪಿನಲ್ಲಿದ್ದೆವು. ಎಸಿಬಿ ಪೊಲೀಸರು 2 ನೇ ಆರೋಪಿ ಹಣ ಪಡೆದ ನಂತರ ಕರ್ಚಿಫನಿಂದ ಚಾಸಾ-1 ಮುಖ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಲು ಸೂಚನೆ ಕೊಟ್ಟರು.

7. ನಂತರ 2 ನೇ ಆರೋಪಿ ಬೈಕ ಮೇಲೆ ಹೋದರು. ಎಸಿಬಿ ಪೊಲೀಸರು ಮತ್ತು ನಾನು 2 ನೇ ಆರೋಪಿ ಮನೆಗೆ ಹೋದೆವು. ಚಾಸಾ-1 ರವರು ಪೋನ ಮುಖಾಂತರ 1 ನೇ ಆರೋಪಿಗೆ ಪೋನ ಮಾಡಿದರು. ಅವರು ಹೆಸ್ಕಾಂ ಕಛೇರಿಯಲ್ಲಿದ್ದೇನೆ ಅಂತಾ ಹೇಳಿದರು. ನಂತರ ಎಸಿಬಿ ಪೊಲೀಸರ ಜೀಪಿನಲ್ಲಿ ಬಂಕಾಪುರದ ಹೆಸ್ಕಾಂ ಕಛೇರಿಗೆ ಹೋದೆವು.

8. ಚಾಸಾ-21 ರವರು 2 ನೇ ಆರೋಪಿಯನ್ನು ವಿಚಾರಣೆ ಮಾಡಿದರು. 2 ನೇ ಆರೋಪಿಗೆ ಲಂಚದ ಹಣ ಎಲ್ಲಿದೆ ಅಂತಾ ಚಾಸಾ-21 ರವರು ಕೇಳಿದಾಗ, ಅದು ಮನೆಯಲ್ಲಿ ಟೇಬಲ್ ಮೇಲಿದೆ

ಅಂತಾ ಹೇಳಿದರು. ಪುನಃ 2 ನೇ ಆರೋಪಿ ಮನೆಗೆ ನಾನು, ಚಾಸಾ-1, ಚಾಸಾ-2, ಚಾಸಾ-21 ಮತ್ತು ಇತರ ಸಿಬ್ಬಂದಿಗಳು ಬಂದೆವು. 2 ನೇ ಆರೋಪಿ ಟೇಬಲ್ ಮೇಲಿರುವ ಹಣವನ್ನು ಎಸಿಬಿ ಪೊಲೀಸರಿಗೆ ತೋರಿಸಿದರು. ಅದು ರೂ.4,000/- ಅಂದರೆ ರೂ.2000/- ಮುಖಬೆಲೆಯ 1 ನೋಟು, ರೂ.500/- ಮುಖಬೆಲೆಯ 4 ನೋಟುಗಳಿತ್ತು. ಸದರಿ ನೋಟುಗಳನ್ನು ನಿಪಿ-5 ರಲ್ಲಿ ಬರೆದ ವಿವರಕ್ಕೆ ತಾಳೆ ಮಾಡಿ ನೋಡಿದೆವು. ಅವು ಹೊಂದಾಣಿಕೆಯಾಗುತ್ತಿದ್ದವು.

9. ಎಸಿಬಿ ಪೊಲೀಸರು ದ್ರಾವಣವನ್ನು ತಯಾರಿಸಿದರು. ಹಣ ಇಟ್ಟ ಜಾಗೆಯಲ್ಲಿ ಹತ್ತಿಯಿಂದ ಒರೆಸಿ, ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ಬಂದಿತು. ಸದರಿ ದ್ರಾವಣ ವನ್ನು ಎಸಿಬಿ ಪೊಲೀಸರು ಪ್ಯಾಕ್ ಮಾಡಿ ಸೀಲು ಮಾಡಿ ಬಾಟಲ್‌ನಲ್ಲಿ ಜಪ್ತಿ ಮಾಡಿದರು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುಮಾ-10 ಅಂತಾ ಗುರುತಿಸಲಾಗಿದೆ. ಹತ್ತಿಯನ್ನು ಕೂಡ ಕವರನಲ್ಲಿ ಹಾಕಿ ಸೀಲು ಮಾಡಿ ಜಪ್ತಿಮಾಡಿದರು. ಸದರಿ ಹತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುಮಾ-7 ಅಂತಾ ಗುರುತಿಸಲಾಗಿದೆ.

10. ಅಲ್ಲಿ ಪಂಚನಾಮೆಯನ್ನು ಸಂಜೆ 6-00 ರಿಂದ 7-00 ಘಂಟೆಯವರೆಗೆ ಮಾಡಿರುತ್ತಾರೆ. ಟ್ರ್ಯಾಪ್ ಪಂಚನಾಮೆಯ ಮೇಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ-4 ಕ್ಕೆ ಸಾಕ್ಷಿ ಸಹಿಯನ್ನು ನಿಪಿ-4(ಸಿ) ಅಂತಾ ಗುರುತಿಸಲಾಯಿತು. 2 ನೇ ಆರೋಪಿಯ ಮನೆಯ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರ ಸಂಭಾಷಣೆ ಪಿರ್ಯಾದಿಯ ಜೊತೆಗೆ ಅಗಿದ್ದನ್ನು ಕೇಳಿಸಿರುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ 2 ನೇ ಆರೋಪಿ ಸಂಭಾಷಣೆ ಪಿರ್ಯಾದಿಯ ಜೊತೆಗೆ ಅಗಿದ್ದನ್ನು ಕೇಳಿಸಿರುತ್ತಾರೆ.

11. ಸಾಕ್ಷಿಗೆ ನಿಪಿ-6 ಸಿಡಿ/ಡಿವಿಡಿಯನ್ನು ಲ್ಯಾಪ್‌ಟಾಪ್ ಮುಖಾಂತರ ಹಾಕಿ ಸಂಭಾಷಣೆ ಯನ್ನು ಕೇಳಿಸಿದ್ದು, ಚಾಸಾ-1 ಮತ್ತು 2 ನೇ ಆರೋಪಿಯ ಧ್ವನಿಯನ್ನು ಕೇಳಿ ಗುರುತಿಸಿರುತ್ತಾರೆ. ಸ್ಥಳ ದಲ್ಲಿ ಪಂಚನಾಮೆ ಮಾಡಿರುತ್ತಾರೆ. ಪುನಃ ಬಂಕಾಪುರ ಹೆಸ್ಕಾಂ ಕಛೇರಿಗೆ ಕರೆದುಕೊಂಡು ಹೋದರು. ಎಸಿಬಿ ಪೊಲೀಸರು 1 ನೇ ಆರೋಪಿಯನ್ನು ಕರೆಸಿ, ಅಲ್ಲಿ ವಿಚಾರಣೆ ಮಾಡಿದರು. ಕೆಇಬಿ ಅಧಿಕಾರಿಗಳು ಬಂದರು. ಅವರನ್ನು ವಿಚಾರಣೆ ಮಾಡಿದರು.

12. ಆರೋಪಿತರ ಮೇಲಾಧಿಕಾರಿಗಳು ಚಾಸಾ-1 ಗೆ ಸಂಬಂಧಪಟ್ಟ ದಾಖಲೆಗಳನ್ನು ಎಸಿಬಿ ಪೊಲೀಸರಿಗೆ ಕೊಟ್ಟರು. ಮುಮಾ-11 ಈಗಾಗಲೇ ಅಸಾ-2 ರವರ ಮುಖಾಂತರ ಗುರುತಿಸಲಾಗಿದೆ.

ಮುಮಾ-11 ನ್ನು ಈ ಸಾಕ್ಷಿಗೆ ಗುರುತಿಸಲು ಆರೋಪಿತರ ಪರ ವಕೀಲರು ಯಾವುದೇ ತಕರಾರು ಇಲ್ಲ ಅಂತಾ ಮನವಿ ಮಾಡಿರುತ್ತಾರೆ. ಮುಮಾ-11 ವಿ.ಬಿ. ಬಾಕ್ಸನಲ್ಲಿ ಇರುತ್ತದೆ.

(ಮಾನ್ಯ ವಿಸಅ ರವರು ಬಣ್ಣದ ಫೋಟೋಗಳನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಆರೋಪಿ ಪರ ವಕೀಲರಾದ ಶ್ರೀ ಯು.ಎನ್.ಜಿ. ವಕೀಲರು ಬಣ್ಣದ ಫೋಟೋಗಳು, ಸಿ.ಡಿ., ಪೆನಡ್ರೈವ ಮತ್ತು ನೆಗೆಟಿವ್ ಗಳನ್ನು ಹಾಜರುಪಡಿಸದೇ ಇರುವುದರಿಂದ ಅವುಗಳನ್ನು ಗುರುತಿಸಲು ತಕರಾರು ಎತ್ತಿರುತ್ತಾರೆ. ಬಣ್ಣದ ಫೋಟೋಗಳು ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ. ತನಿಖಾಧಿಕಾರಿ ಬಣ್ಣದ ಫೋಟೋಗಳ ಪೂರಕವಾಗಿ ಸಿ.ಡಿ., ಪೆನಡ್ರೈವ ಮತ್ತು ನೆಗೆಟಿವ್ ಮತ್ತು ಕಲಂ-65(ಬಿ) ಸಾಕ್ಷ್ಯ ಅಧಿನಿಯಮ ಅಡಿಯಲ್ಲಿ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. ಆದ್ದರಿಂದ ಅವುಗಳನ್ನು ಗುರುತಿಸಬೇಕೆಂಬ ಮಾನ್ಯ ವಿಸಅ ರವರ ಮನವಿಯನ್ನು ತಳ್ಳಿಹಾಕಲಾಯಿತು.)

(ಈ ಹಂತದಲ್ಲಿ ಸಾಕ್ಷಿಯು ನೀಡಿರುವ ಹೇಳಿಕೆ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಅವು ಪರಸ್ಪರ ವ್ಯತಿರಿಕ್ತವಾಗಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿದ್ದು ಮತ್ತು ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಸರ್ಕಾರಿ ಅಭಿಯೋಜಕರು ಕೋರಿದ್ದರಿಂದ ಅನುಮತಿಸಲಾಗಿದೆ.)

**<u>ಪಾಟೀ ಸವಾಲುಃ ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –</u>**

13. 2 ನೇ ಆರೋಪಿ ಟೇಬಲ್ ಮೇಲೆ ಪ್ಲಾಸ್ಟಿಕ್ ಚೀಲ ಮುಮಾ-9 ನ್ನು ಕೂಡ ಜಪ್ತಿಮಾಡಿರುತ್ತಾರೆ ಎಂದು ಸೂಚಿಸುವುದು ನಿಜ. 2 ನೇ ಆರೋಪಿಯ ಮನೆಯಲ್ಲಿ ದ್ರಾವಣವನ್ನು ತಯಾರಿಸಿದರು, ಅದನ್ನು ಕೂಡ ಎಸಿಬಿ ಪೊಲೀಸರು ಬಾಟಲನಲ್ಲಿ ಹಾಕಿ ಸೀಲು ಮಾಡಿ ಜಪ್ತಿ ಮಾಡಿರುತ್ತಾರೆ ಎಂದು ಸೂಚಿಸುವುದು ನಿಜ. ಎಸಿಬಿ ಪೊಲೀಸರು ಹತ್ತಿ ಮುಮಾ-8 ನ್ನು ಕೂಡ ಜಪ್ತಿ ಮಾಡಿರುತ್ತಾರೆ ಎಂದು ಸೂಚಿಸುವುದು ನಿಜ.

14. ನಮ್ಮ ಸಮಕ್ಷಮ ಚಾಸಾ-1 ಮತ್ತು 1 ಮತ್ತು 2 ನೇ ಆರೋಪಿತರ ಧ್ವನಿ ಸಂಭಾಷಣೆಯನ್ನು ಕೇಳಿಸಿದರು ಎಂದು ಸೂಚಿಸುವುದು ನಿಜ. ಸದರಿ ಸಂಭಾಷಣೆಗಳನ್ನು ಸಿಡಿಯಲ್ಲಿ ವರ್ಗಾವಣೆ ಮಾಡಿದರು ಎಂದು ಸೂಚಿಸುವುದು ನಿಜ. ಸಾಕ್ಷಿಯು ಚಾಸಾ-1, 1 ನೇ ಮತ್ತು 2 ನೇ ಆರೋಪಿತರ ಧ್ವನಿ ಮಾದರಿ ಸಂಭಾಷಣೆಗಳನ್ನು ಕೇಳಿ ಗುರುತಿಸಿರುತ್ತಾರೆ. ಸದರಿ 3 ಸಿಡಿಗಳನ್ನು ನಿಪಿ-10 ರಿಂದ ನಿಪಿ-12 ಅಂತಾ ಕ್ರಮವಾಗಿ ಗುರುತಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರಃ ಶ್ರೀ ಯು.ಎನ್.ಜಿ. ವಕೀಲರಿಂದಃ–</u>**

15. ನಮ್ಮ ಶಾಲೆಯ ಮುಖ್ಯ ಗುರುಗಳು ಎಸಿಬಿ ಕಛೇರಿಗೆ ಹೋಗಲು ಲಿಖಿತವಾಗಿ ಆದೇಶ ಕೊಟ್ಟಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನಂತರ 10-15 ದಿನಗಳ ನಂತರ ಕೊಟ್ಟಿರುತ್ತಾರೆ. ಆರೋಪಿ

ನಂ-1 ಮತ್ತು 2 ರವರು ನನಗೆ ವೈಯಕ್ತಿಕವಾಗಿ ಪರಿಚಯ ಇರಲಿಲ್ಲ. ಪರಿಚಯ ಇರದ ವ್ಯಕ್ತಿಗಳ ಧ್ವನಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಯಾವ ಲೋಕಾಯುಕ್ತ ಪೊಲೀಸರು ನನ್ನನ್ನು ಕರೆಯಲು ಬಂದಿದ್ದರು ನನಗೆ ಗೊತ್ತಿಲ್ಲ.

16. ಎಸಿಬಿ ಪೊಲೀಸರು ದೂರು ಮತ್ತು ಪ್ರ.ವ.ವರದಿಯ ಪ್ರತಿಯನ್ನು ತೋರಿಸಿರುತ್ತಾರೆ. ಅವುಗಳಲ್ಲಿ ಏನು ವಿಷಯ ಬರೆದಿದೆ ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಿಜ. ಎಸಿಬಿ ಕಛೇರಿಗೆ ಹೋದಾಗ ಅಲ್ಲಿ ಯಾರು ಯಾರು ಇದ್ದರು ಅಂತಾ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ನನಗೆ ಸೋಡಿಯಂ ಕಾರ್ಬೋನೇಟ್ ಮತ್ತು ಪಿನಾಫ್ತಲಿನ್ ಪೌಡರ ಬಗ್ಗೆ ಮಾಹಿತಿ ಇದೆ. ಪಿನಾಫ್ತಲಿನ್ ಪೌಡರ ಕೈಗೆ ಮತ್ತು ಯಾವುದೇ ವಸ್ತುಗಳ ಮೇಲೆ ಸಿಂಪಡಿಸಿದರೆ ಅದು ಕಾಣುವುದಿಲ್ಲ ಎಂದರೆ ನಿಜ.

17. ಎರಡು ಸಾರಿ ಎಸಿಬಿ ಪೊಲೀಸರು ಧ್ವನಿ ಸಂಭಾಷಣೆಯನ್ನು ಕೇಳಿಸಿರುತ್ತಾರೆ. ನಾನು ಧ್ವನಿ ಸಂಭಾಷಣೆಯ ವಿವರವನ್ನು ಬರೆದುಕೊಂಡಿಲ್ಲ. ಅದನ್ನು ಯಾರಾದರೂ ಬರೆದುಕೊಂಡರಾ ಅನ್ನುವ ಮಾಹಿತಿ ನನಗೆ ಇಲ್ಲ. ಧ್ವನಿ ಸಂಭಾಷಣೆ ಎಲ್ಲಿಂದ ರೆಕಾರ್ಡ ಆಗಿತ್ತು ಅಂತಾ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ. ನನ್ನ ಸಮಕ್ಷಮ ಎಸಿಬಿ ಪೊಲೀಸರು ಮೊಬೈಲನ್ನು ಜಪ್ತಿ ಮಾಡಿಲ್ಲ. ಎಸಿಬಿ ಕಛೇರಿಯ ಚೆಕ್ಕುಬಂದಿ ಹೇಳಲು ಬರುವುದಿಲ್ಲ.

18. ಈಗ ನೋಟುಗಳ ನಂಬರುಗಳ ವಿವರಗಳನ್ನು ಹೇಳಲು ಬರುವುದಿಲ್ಲ. ನನಗೆ ಧ್ವನಿ ಸಂಭಾಷಣೆ ಕೇಳಿಸುವುದಕ್ಕಿಂತ ಮುಂಚೆ ಲ್ಯಾಪಟ್ಯಾಪನಲ್ಲಿ ಏನು ವಿಷಯ ದಾಖಲಾಗಿದೆ ನನಗೆ ಹೇಳಲು ಆಗುವುದಿಲ್ಲ ಎಂದರೆ ನಿಜ. ರೂ.100/- ಮುಖಬೆಲೆಯ 2 ನೋಟುಗಳನ್ನು ಜಪ್ತಿಮಾಡಿ ಕವರನಲ್ಲಿ ಹಾಕಿ ಸೀಲು ಮಾಡಿದರು. ನಾನು ಸಹಿ ಮಾಡಿಲ್ಲ. ನಿಪಿ-2 ನ್ನು ನಾನು ಹೇಳಿ ಬರೆಸಿಲ್ಲ ಎಂದರೆ ನಿಜ. ನಿಪಿ-2 ರಲ್ಲಿ ಏನು ವಿಷಯ ಬರೆದಿದೆ ನನಗೆ ಗೊತ್ತಿಲ್ಲ ಎಂದರೆ ನಿಜ. ನಿಪಿ-2 ಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಅಂತಾ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ.

19. ಎಸಿಬಿ ಪೊಲೀಸರು ಪಂಚನಾಮೆಯನ್ನು ಯರು ಬೆರಳಚ್ಚುಪಡಿಸಿದರು ಗೊತ್ತಿಲ್ಲ ಎಂದರೆ ನಿಜ. ಸಂಜೆ 5-30 ಗೆ ಬಂಕಾಪುರ ಹೆಸ್ಕಾಂ ಕಛೇರಿಗೆ ಹೋದೆವು. ಮಧ್ಯರಾತ್ರಿ 1-30 – 2-00 ಘಂಟೆಗೆ ಎಸಿಬಿ ಕಛೇರಿಗೆ ಬಂದೆವು. ಹೆಸ್ಕಾಂ ಕಛೇರಿಯಲ್ಲಿ ಕೂಡ ಪಂಚನಾಮೆಯನ್ನು ನಾನು ಹೇಳಿ ಬರೆಸಿಲ್ಲ ಎಂದರೆ ನಿಜ. ನಿಪಿ-4 ರಲ್ಲಿ ಏನು ಬರೆದಿದೆ ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ

ಎಂದರೆ ನಿಜ. ನಿಪಿ-4 ರಲ್ಲಿ ಎಷ್ಟು ಜನರು ಸಹಿ ಮಾಡಿರುತ್ತಾರೆ ಅಂತಾ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ. ನಿಪಿ-4 ನ್ನು ಯಾರು ಹೇಳಿ ಬರೆಸಿದರು ಮತ್ತು ಯಾರು ಟೈಪ ಮಾಡಿದರು ನನಗೆ ಗೊತ್ತಿಲ್ಲ ಎಂದರೆ ನಿಜ.

20. ಕೆಲವೊಂದು ದಾಖಲೆಗಳಿಗೆ ಬಂಕಾಪುರ ಹೆಸ್ಕಾಂ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಕೆಲವೊಂದು ದಾಖಲೆಗಳಿಗೆ ಹಾವೇರಿಯ ಎಸಿಬಿ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಹಾವೇರಿ ಎಸಿಬಿ ಕಛೇರಿಯಲ್ಲಿ ಮತ್ತು ಬಂಕಾಪುರ ಹೆಸ್ಕಾಂ ಕಛೇರಿಯಲ್ಲಿ ಎಷ್ಟು ಎಷ್ಟು ಸಹಿ ಮಾಡಿರುತ್ತೇನೆ ಅಂತಾ ಹೇಳಲು ಬರುವುದಿಲ್ಲ ಎಂದು ಸೂಚಿಸುವುದು ನಿಜ.

21. ನನ್ನನ್ನು ಬಂಕಾಪುರ ಹೆಸ್ಕಾಂ ಕಛೇರಿಗೆ ಮತ್ತು ಹಾವೇರಿ ಎಸಿಬಿ ಕಛೇರಿಗೆ ಹೋಗಿದ್ದನ್ನು ಬಿಟ್ಟು ಬೇರೆ ಕಡೆಗೆ ಕರೆದುಕೊಂಡು ಹೋಗಿಲ್ಲ ಎಂದು ಸೂಚಿಸುವುದು ನಿಜ. 2 ನೇ ಆರೋಪಿಯ ಮನೆಯ ಚೆಕ್ಕುಬಂದಿ, ಬಂಕಾಪುರ ಹೆಸ್ಕಾಂ ಕಛೇರಿಯ ಚೆಕ್ಕುಬಂದಿ ಹೇಳಲು ಬರುವುದಿಲ್ಲ ಎಂದು ಸೂಚಿಸುವುದು ನಿಜ. ಮುಮಾ-3 ಮತ್ತು ಮುಮಾ-5 ಬಿಳಿ ಬಣ್ಣದ ದ್ರಾವಣಗಳಿವೆ ಎಂದು ಸೂಚಿಸುವುದು ನಿಜ. ನಾವು ನಿಂತ ಜಾಗೆಯಿಂದ 2 ನೇ ಆರೋಪಿ ಮನೆ ಕಾಣುತ್ತಿರಲಿಲ್ಲ ಎಂದರೆ ನಿಜ.

22. ಧ್ವನಿ ಕೇಳಿಸಿದ್ದನ್ನು ನಾನು ಬರೆದುಕೊಂಡಿಲ್ಲ ಎಂದರೆ ನಿಜ. ನಾನು ಬರೆದುಕೊಳ್ಳದೇ ಇರುವುದರಿಂದ ಸಂಭಾಷಣೆಯಲ್ಲಿ ಎನಿತ್ತು ಅಂತಾ ಹೇಳಲು ಬರುವುದಿಲ್ಲ ಎಂದು ಸೂಚಿಸುವುದು ನಿಜ. ನಿಪಿ-4 ನ್ನು ಪ್ರಿಂಟಔಟ ಎಸಿಬಿ ಕಛೇರಿಯಲ್ಲಿ ತೆಗೆದಿರುತ್ತಾರೆ ಎಂದು ಸೂಚಿಸುವುದು ನಿಜ. ಯಾವ ಕೆಲಸಕ್ಕೆ ಪಂಚನಾಮೆಗೆ ಹೋಗಿದ್ದೆ ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ.

23. ಎಸಿಬಿ ಕಛೇರಿಗೆ ಹೋಗಿದ್ದೆ, ಅಲ್ಲಿ ಧ್ವನಿ ಸಂಭಾಷಣೆ ಕೇಳಿಸಿದರು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಸಬಿ ಪೊಲೀಸರು ಅವರ ಕಛೇರಿಯಲ್ಲಿ ಚಾಸಾ-1 ರವರು ರೂ.4,000/- ಕೊಟ್ಟರು, ಸದರಿ ನೋಟುಗಳಿಗೆ ಪಿನಾಫ್ತಲಿನ್ ಪೌಡರ ಹಚ್ಚಿದರು, ಸದರಿ ನೋಟುಗಳ ನಂಬರುಗಳ ವಿವರಗಳನ್ನು ಬರೆದುಕೊಂಡೆವು, ನನ್ನ ಕೈ ತೊಳೆಸಿದರು, ಆಗ ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು, ಆ ದ್ರಾವಣವನ್ನು ಬಾಟಲನಲ್ಲಿ ಹಾಕಿ ಜಪ್ತಿಮಾಡಿದರು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ-1 ಹಾಜರಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**24.** ಚಾಸಾ-1 ಮತ್ತು ಚಾಸಾ-2 ರವರು 2 ನೇ ಆರೋಪಿಯ ಮನೆಗೆ ಹೋದರು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಂತರ ಹೆಸ್ಕಾಂ ಕಛೇರಿಗೆ ಹೋದೆವು, ಅಲ್ಲಿ ಎಸಿಬಿ ಪೊಲೀಸರು ಪಂಚನಾಮೆ ಮಾಡಿದರು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಸಿಬಿ ಪೊಲೀಸರು ಹತ್ತಿಯಿಂದ ಒರೆಸಿಲ್ಲ, ಹತ್ತಿಯನ್ನು ಪ್ಯಾಕ ಮಾಡಿ ಸೀಲು ಮಾಡಿಲ್ಲ, ಯಾವುದೇ ದ್ರಾವಣವನ್ನು ತಯಾರು ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**25.** ಇಂಜಿನೀಯರ ಬಂದು ನಕಾಶೆ ತಯಾರು ಮಾಡಿದರು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಹೆಸ್ಕಾಂ ಕಛೇರಿಯಲ್ಲಿ ವಿಚಾರಣೆ ಮಾಡಿದರು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಪ್ತಿಮಾಡಿದ ದಾಖಲೆಗಳಲ್ಲಿ ಏನು ವಿಷಯ ಇದೆ ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಿಜ.

**26.** ನಂತರ ಎಸಿಬಿ ಕಛೇರಿಗೆ ಹೋಗಿಯೇ ಇಲ್ಲ. ಪುನಃ ಬೇರೆ ತಾರೀಖಿಗೆ ಎಸಿಬಿ ಪೊಲೀಸರು ಧ್ವನಿ ಮಾದರಿಯನ್ನು ನನಗೆ ಕೇಳಿಸಿಲ್ಲ ಎಂದು ಸೂಚಿಸುವುದು ನಿಜ. ಪಂಚನಾಮೆಗಳಲ್ಲಿ ಭಾಗವಹಿಸಿಲ್ಲ, ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.